MVC No.358/2023
RW-1

**ದಿನಾಂಕ 19-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.**

**ಪಾಟೀ ಸವಾಲು :-** ಅರ್ಜಿದಾರ ಪರ ಶ್ರೀ ಹೆಚ್. ಎಂ. ವಕೀಲರಿಂದ.

ಅಪಘಾತವಾದ ನಂತರ ಗಾಯಾಳುವನ್ನು ಸದರಿ ಬಸ್ಸಿನಲ್ಲಿ ತೆಗೆದುಕೊಂಡು ಲಿಂಗಸೂಗೂರು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ಆಸ್ಪತ್ರೆಯಲ್ಲಿ ಗಾಯಾಳುವನ್ನು ದಾಖಲು ಮಾಡುವ ಸಂದರ್ಭದಲ್ಲಿ ಗಾಯಾಳು ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಹೇಳಿ ಬರೆಸಿರುತ್ತೇನೆ. ಲಿಂಗಸೂಗೂರು ಪೊಲೀಸ್ ಠಾಣೆಗೆ ಮೃತ ಅಶೋಕ್ ಚಲಿಸುತ್ತಿದ್ದ ಬಸ್ಸಿನ ಬಾಗಿಲನ್ನು ತಾನೆ ತೆಗೆದು ಬಿದ್ದು ಗಾಯಗೊಂಡು ಮೃತ ಪಟ್ಟಿರುತ್ತಾನೆ ಎಂದು ದೂರನ್ನು ನೀಡಿರುತ್ತೇನೆ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ದಿ. 29-07-2022 ರಂದು ಹಟ್ಟಿ ಪೊಲೀಸರು ನನ್ನನ್ನು ಬಂದಿಸಿರುತ್ತಾರೆ ಅಂದರೆ ಸರಿಯಲ್ಲ. ಅದೇ ದಿನ ನನ್ನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆ ಅಂದರೆ ಸರಿ.

ನನ್ನ ಮತ್ತು ಕಂಡೇಕ್ಟರ್ ವಿರುದ್ಧ ಪ್ರಕರಣ ದಾಖಲಾಗಿರುತ್ತದೆ ಅಂದರೆ ಕಂಡಕ್ಟರ್ ವಿರುದ್ಧ ಪ್ರಕರಣ ದಾಖಲಾದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ವಿರುದ್ಧ ಲಿಂಗಸೂಗೂರು ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ಚಾಲ್ತಿಯಲ್ಲಿ ಇರುತ್ತದೆ ಅಂದರೆ ಸರಿ. ಸದರಿ ಕ್ರಿಮಿನಲ್ ಪ್ರಕರಣದ ಸಂಖ್ಯೆ 1794/2022 ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ನಡೆಯುತ್ತಿದ್ದೆ ಅಂದರೆ ಸರಿ.

ಅಪಘಾತವಾದ ನಂತರ ನನ್ನ ಮೇಲಾಧಿಕಾರಿಗಳಿಗೆ ಲಿಖಿತವಾಗಿ ಅಪಘಾತದ ಕುರಿತು ಮಾಹಿತಿಯನ್ನು ನೀಡಿರುತ್ತೇನೆ. ಮೇಲಾಧಿಕಾರಿಗೆ ಲಿಖಿತವಾಗಿ ಸಲ್ಲಿಸಿದ ಮಾಹಿತಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಈ ಪ್ರಕರಣದಲ್ಲಿ ನಾನು ತಕರಾರನ್ನು ಸಲ್ಲಿಸಿರುತ್ತೇನೆ.

ಅಪಘಾತವಾದ ನಂತರ ಗಾಯಾಳುವನ್ನು ಲಿಂಗಸೂಗೂರು ಆಸ್ಪತ್ರೆಯಲ್ಲಿ ಬಿಟ್ಟು ಅಪಘಾತದ ಕುರಿತು ವೈದ್ಯರಿಗೆ ಮಾಹಿತಿ ನೀಡದೇ ಅಲ್ಲಿಂದ ಓಡಿ ಹೋಗಿರುತ್ತೇನೆ ಅಂದರೆ ಸರಿಯಲ್ಲ. ಅಪಘಾತದ ಕುರಿತು ಮೇಲಾಧಿಕಾರಿಗಳಿಗೆ ನಾನು ಮಾಹಿತಿಯನ್ನು ನೀಡಿರುವುದಿಲ್ಲ ಅಂದರೆ ಸರಿಯಲ್ಲ.  ಮೃತ ಅಶೋಕ ತನ್ನ ತಪ್ಪಿನಿಂದ ಬಸ್ಸಿನಿಂದ ಕೆಲಗೆ ಬಿದ್ದು ಮೃತ ಪಟ್ಟಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಬಸ್ಸನ್ನು ಅತೀ ವೇಗ ವಾಗಿ ಚಲಾಯಿಸಿ ಅಂಸನಲ್ಲಿ ಬಸ್ಸನ್ನು ಜಂಪ್ ಮಾಡಿಸಿದ್ದರಿಂದ ನಿರ್ವಹಕನು ಬಾಗಿಲನ್ನು ಹಾಕದೇ ಇದ್ದುದರಿಂದ ಬಾಗಿಲು ತೆರೆದು ನಮ್ಮಗಳ ತಪ್ಪಿನಿಂದ ಪ್ರಯಾಣಿಕ ಅಶೋಕ್ ಕೆಳಗೆ ಬಿದ್ದು ಮೃತ ಪಟ್ಟಿರುತ್ತಾನೆ ಅಂದರೆ ಸರಿಯಲ್ಲ. ನಮ್ಮ ತಪ್ಪನ್ನು ಮುಚ್ಚಿ ಹಾಕಲು ತನ್ನ ತಪ್ಪಿನಿಂದ ಅಶೋಕ್ ಮೃತ ಪಟ್ಟಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಸುಳ್ಳುನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**)**

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.